ಇ. ಸಿ.ಐ.ಡಿ.ಬಿ. ಯವರ ಪ್ರಸ್ತಾವನೆಯ ಸಮಗ್ರ ಪರಿಶೀಲನೆಯ ನಂತರ ಸಾಧಕ ಬಾಧಕಗಳನ್ನು ಪರಿಗಣಿಸಿ ನಿರ್ಣಯಿಸಿದ ನಂತರ ಅನುಷ್ಠಾನಗೊಳಿಸಲು ಯೋಜಿಸಲಾಗುವುದು.

ಈ. ಈ ಕಾಮಗಾರಿಯು ಈಗ ಯೋಜನಾ ಹಂತದಲ್ಲಿದೆ. ಪ್ರಾರಂಭವಾದ ನಂತರ ಕಾಮಗಾರಿಯನ್ನು ಪೂರ್ತಿಗೊಳಿಸಲು 3 ವರ್ಷಗಳು ಬೇಕಾಗುತ್ತದೆಂದು ಅಂದಾಜಿಸಿದೆ.

ಉ) ಇದಕ್ಕಾಗಿ ಆಗಬಹುದಾದ ವೆಚ್ಚವನ್ನು ಇನ್ನೂ ಅಂತಿಮವಾಗಿ ನಿಗದಿಪಡಿಸಬೇಕಾಗಿದೆ.

ಸೋಮವಾರಪೇಟೆ ತಾಲ್ಲೂಕ ಅರಣ್ಯ ಇಲಾಖೆಯ ನಿಸರ್ಗಧಾಮದಿಂದ ಬರುವ ಆದಾಯ

171(725) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಅರಣ್ಯ ಇಲಾಖೆಯ ನಿಸರ್ಗಧಾಮದಿಂದ ಸರ್ಕಾರಕ್ಕೆ ಬರುವ ಒಟ್ಟು ವಾರ್ಷಿಕ ಆದಾಯವೆಷ್ಟು?

ಆ) ಇದರ ಅಭಿವೃದ್ಧಿ ನಿರ್ವಹಣೆಗಾಗಿ ಎಷ್ಟು ಹಣವನ್ನು ವಾರ್ಷಿಕ ಬಿಡುಗಡೆ ಮಾಡಲಾಗುತ್ತಿದೆ?

ಇ) ಈ ನಿಸರ್ಗಧಾಮವನ್ನು ಇತ್ತೀಚೆಗೆ ಮುಚ್ಚಲಾಗಿದೆಯೇ? ಹಾಗಿದ್ದಲ್ಲಿ ಯಾವಾಗಿನಿಂದ ಮುಚ್ಚಲಾಗಿದೆ?

ಈ) ಮುಚ್ಚಲು ಕಾರಣಗಳೇನು? ಇದಕ್ಕೆ ನೇರ ಜವಾಬ್ದಾರರು ಯಾರು?

ಶ್ರೀ ಕೆ.ಎಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) 2001-02 ರಲ್ಲಿ ಒಟ್ಟು ವಾರ್ಷಿಕ ಆದಾಯ ರೂ. 17.87 ಲಕ್ಷ.

ಆ) 2001-02 ರಲ್ಲಿ ಒಟ್ಟು ರೂ. 9 ಲಕ್ಷ

ಇ) ಮುಚ್ಚಿಲ್ಲ. ದಿನಾಂಕ 2-6-2002 ರಿಂದ 15-6-2002 ರವರೆಗೆ ಮುಚ್ಚಲಾಗಿತ್ತು.

ಈ) ನಿಸರ್ಗಧಾಮದ ಕುಟೀರಗಳನ್ನು ವಾರ್ಷಿಕ ನಿರ್ವಹಣೆಯ ಪ್ರಯುಕ್ತ ತಾತ್ಕಾಲಿಕವಾಗಿ ಮುಚ್ಚಲಾಗಿತ್ತು.

ಸರ್ಕಾರದಿಂದ ಗುತ್ತಿಗೆದಾರರಿಗೆ ಬಾಕಿ

172(285) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಲಾಖೆಯ ವಿವಿಧ ಕಾಮಗಾರಿಗಳನ್ನು ಪೂರೈಸಿದ್ದರೂ ಗುತ್ತಿಗೆದಾರರಿಗೆ ಹಣವನ್ನು ಪಾವತಿಸದೆ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಬಾಕಿ ಮೊತ್ತವೆಷ್ಟು?

ಆ) ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಮೊತ್ತ ಬಾಕಿ ಇದೆ; ಜಿಲ್ಲಾವಾರು ವಿವರ ನೀಡುವುದು;

ಇ) ಪಾವತಿಸದಿರಲು ಕಾರಣಗಳೇನು; ಯಾವ ವರ್ಷದಿಂದ ಈ ಹಣ ಬಾಕಿ ಇದೆ;

ಈ) ಹಣ ಪಾವತಿಯಾಗದಿರುವುದರಿಂದ ಗುತ್ತಿಗೆದಾರರು ಕಾಮಗಾರಿ ಗುಣಮಟ್ಟ ಕಾಪಾಡದಿರುವ ಅಂಶ ಬೆಳಕಿಗೆ ಬಂದಿದೆಯೇ;

ಉ) ಯಾವಾಗ ಈ ಹಣವನ್ನು ಬಿಡುಗಡೆ ಮಾಡಿ ಪಾವತಿಸಲಾಗುತ್ತದೆ.

ಊ) ಪಾವತಿ ವಿಳಂಬವಾದ ಕಾರಣ ಗುತ್ತಿಗೆದಾರರು ಪ್ರತಿಭಟನೆ ವ್ಯಕ್ತಪಡಿಸಿರುವುದು ನಿಜವೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ವಿವಿಧ ಕಾಮಗಾರಿಗಳಿಗೆ ಹಣ ಪಾವತಿಸದೆ ಬಾಕಿ ಇರುವ ಪ್ರಕರಣಗಳು ಈ ಕೆಳಕಂಡಂತೆ ಇರುತ್ತದೆ.

	ವಲಯ	ಬಾಕಿ ಬಿಲ್ಲುಗಳ ಸಂಖ್ಯೆ	ಪಾವತಿ ಬೇಕಾದ ಮೊತ್ತ (ಲಕ್ಷ. ರೂಗಳಲ್ಲಿ)
	1	2	3
ಅ.	ಸಂಪರ್ಕ ಮತ್ತು ಕಟ್ಟಡ (ದ)	18528	13582.00
ಆ.	ಸಂಪರ್ಕ ಮತ್ತು ಕಟ್ಟಡ (ಉ)	19440	10918.49
	ಮೊತ್ತ	**37968**	**24500.49**

ಆ. ಜಿಲ್ಲಾವಾರು ಬಾಕಿ ಇರುವ ಬಿಲ್ಲುಗಳಿಗೆ ಪಾವತಿಸಬೇಕಾದ ಮೊತ್ತದ ವಿವರ ಲಗತ್ತಿಸಿದೆ.

ಇ. ಆರ್ಥಿಕ ಇಲಾಖೆಯಿಂದ ಹಣ ಬರವಸೆ ಪತ್ರವನ್ನು ಕಾರ್ಯಪಾಲಕ ಇಂಜಿನಿಯರುಗಳಿಗೆ ನೇರವಾಗಿ ಬಿಡುಗಡೆ ಮಾಡುತ್ತಲ್ಲಿದ್ದು, ಬಿಡುಗಡೆಯಾದ ಮೊತ್ತದಲ್ಲಿ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ.

ಈ. ಇಲ್ಲ

ಉ. ಆರ್ಥಿಕ ಇಲಾಖೆಯಿಂದ ಕಾಲಾನು ಕಾಲಕ್ಕೆ ಹಣ ಬಿಡುಗಡೆಯಾದ ಪ್ರಕಾರ ಹಂತ ಹಂತವಾಗಿ ಬಿಲ್ಲುಗಳನ್ನು ಪಾವತಿಸಲಾಗುತ್ತದೆ.

ಊ. ಇಲ್ಲ.

ಜಿಲ್ಲಾವಾರು ಬಾಕಿ ಬಿಲ್ಲುಗಳ ವಿವರ

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ರಸ್ತೆ ಕಾಮಗಾರಿಗಳು			ಕಟ್ಟಡ ಕಾಮಗಾರಿಗಳು	
		ಯೋಜನೆ	ಯೋಜನೇತರ	ನಬಾರ್ಡ್	ಯೋಜನೆ	ಯೋಜನೇತರ
1	2	3	4	5	6	7
1.	ಬೆಂಗಳೂರು ನಗರ	-	29.72	-	431.50	2069.70
2.	ಬೆಂಗಳೂರು ಗ್ರಾಮಾಂತರ	9.94	643.16	203.64	20.43	15.50
3.	ಕೋಲಾರ	36.43	719.84	161.41	84.81	91.52
4.	ತುಮಕೂರು	13.67	584.27	201.29	61.03	108.57
5.	ಮೈಸೂರು	47.37	576.82	149.64	22.62	288.51
6.	ಚಾಮರಾಜನಗರ	5.83	134.65	117.84	36.66	42.15
7.	ಮಂಡ್ಯ	23.74	873.75	366.28	12.01	113.84
8.	ಹಾಸನ	162.95	413.66	265.00	79.82	81.42
9.	ಚಿಕ್ಕಮಗಳೂರು	1.08	317.85	114.38	30.44	32.12
10.	ಮಂಗಳೂರು	41.68	457.69	134.80	45.10	121.85
11.	ಕೊಡಗು	27.37	264.44	24.89	28.65	38.03
12.	ಉಡುಪಿ	43.35	269.96	55.74	9.18	67.18
13.	ಶಿವಮೊಗ್ಗ	34.13	440.00	78.10	41.35	109.00
14.	ಚಿತ್ರದುರ್ಗ	-	364.11	112.90	35.10	118.90
15.	ದಾವಣಗೆರೆ	15.50	416.23	96.31	41.29	93.43
16.	ಧಾರವಾಡ	70.00	217.90	70.00	12.00	254.98
17.	ಹಾವೇರಿ	50.00	268.38	209.00	6.21	76.06
18.	ಗದಗ	56.68	181.97	51.00	28.07	99.60
19.	ಕಾರವಾರ	44.82	258.07	188.68	56.41	207.17
20.	ಬೆಳಗಾಂ	97.10	980.64	502.54	73.40	260.94

1	2	3	4	5	6	7
21.	ಬಿಜಾಪುರ	25.00	349.62	289.65	4.94	134.24
22.	ಬಾಗಲಕೋಟೆ	84.40	404.46	367.68	5.77	77.68
23.	ಗುಲ್ಬರ್ಗಾ	110.74	557.05	502.60	128.20	158.45
24.	ಬೀದರ್	131.21	447.24	174.63	31.38	221.79
25.	ಬಳ್ಳಾರಿ	487.33	386.11	108.16	15.36	173.02
26.	ರಾಯಚೂರು	53.26	341.55	267.93	18.35	135.89
27.	ಕೊಪ್ಪಳ	14.00	227.33	123.00	10.19	59.06
	ಒಟ್ಟು	**1687.58**	**11126.47**	**4937.09**	**1370.27**	**5250.60**

ರಾಜ್ಯದಲ್ಲಿ ಬರೀ ಮರೀಚಿಕೆಯಾಗಿರುವ ಉದ್ಯೋಗ

173(286) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹಾಲಿ ನಿರುದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟಿದೆ?

ಆ) ಆ ಪೈಕಿ ಪದವೀದರರೆಷ್ಟು? ಸ್ನಾತಕ ಪದವೀದರರೆಷ್ಟು? ಎಸ್.ಎಸ್.ಎಲ್.ಸಿ. ಪಾಸಾದವರೆಷ್ಟು? ವಿವಿಧ ತಾಂತ್ರಿಕ ಶಿಕ್ಷಣ ಪಡೆದವರೆಷ್ಟು?

ಇ) ಉದ್ಯೋಗಾಕಾಂಕ್ಷಿಗಳಾಗಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ ಕೊಂಡಿರುವವರ ಸಂಖ್ಯೆ ಜಿಲ್ಲಾವಾರು ಮಾಹಿತಿ ನೀಡುವುದು?

ಈ) ಈ ಸಂಖ್ಯೆಗಳಿಗನುಗುಣವಾಗಿ ಪ್ರತಿ ವರ್ಷ ಉದ್ಯೋಗ ಮತ್ತು ತರಬೇತಿ ಇಲಾಖೆಯು ಸೂಕ್ತ ಉದ್ಯೋಗಾವಕಾಶ ಕಲ್ಪಿಸಿದೆಯೇ ಈ ನಿಟ್ಟಿನಲ್ಲಿ ಇಲಾಖೆಯ ಶ್ರಮ ಏನು?

ಉ) ಎಷ್ಟು ಜನವರಿಗೆ ಉದ್ಯೋಗಕ್ಕೆ ಅವಕಾಶ ನೀಡಿದೆ, ಜಿಲ್ಲಾವಾರು ವಿವರ ನೀಡುವುದು.

ಊ) ಇವರುಗಳಿಗೆಲ್ಲಾ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಋ) ಗಣನೀಯವಾಗಿ ಬೆಳೆಯುತ್ತಿರುವ ಈ ನಿರುದ್ಯೋಗಿಗಳ ಉದ್ಯೋಗ ಸಮಸ್ಯೆ ಪರಿಹಾರದ ಬಗ್ಗೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

ಶ್ರೀ ಖಮುರುಲ್ಲಾ ಇಸ್ಲಾಂ (ಕಾರ್ಮಿಕ ಸಚಿವರು):

ಅ) ಏಪ್ರಿಲ್ 2002ರ ಅಂತ್ಯಕ್ಕೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳ ಅನುಸಾರ ಒಟ್ಟು 19,98,789 ಅಭ್ಯರ್ಥಿಗಳು ಉದ್ಯೋಗ ನೆರವಿಗಾಗಿ ತಮ್ಮ ಹೆಸರನ್ನು ನೋಂದಾಯಿಸಿರುತ್ತಾರೆ.